- -                    ಓ ಎಸ್ ನಂ.  /151/2021

ಪಿ.ಡಬ್ಲ್ಯೂ :1

ದಿನಾಂಕ :05-12-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಪಾಟೀ ಸವಾಲುಃ **1** ನೇ ಪ್ರತಿವಾದಿ ಪರ ವಕೀಲರಿಂದಃ

ಸ್ವತ್ತುಗಳಲ್ಲಿ ಭಾಗಾಂಶಕೋರಿ ಈ ದಾವೆಯನ್ನು ಸಲ್ಲಿಸಿದ್ದೇನೆ. ಪ್ರಸ್ತುತ ದಾವೆಯಲ್ಲಿ ನಿಮ್ಮ ಎಲ್ಲ ಪಿತ್ರಾರ್ಜಿತ ಸ್ವತ್ತುಗಳನ್ನು ಸೇರಿಸಿಲ್ಲ ಎಂದರೆ ಸಾಕ್ಷಿಯು ಎಷ್ಟು ಸ್ವತ್ತುಗಳಿವೆಯೋ ಅಷ್ಟನ್ನು ಸೇರಿಸಿದ್ದೇವೆ ಎಂದು ತಿಳಿಸಿದ್ದಾರೆ. ಸರ್ವೆ ನಂ.85/3 ರಲ್ಲಿ 1 ಎಕರೆ 21 ಗುಂಟೆ ಸ್ವತ್ತನ್ನು ಮಾರಾಟ ಮಾಡಲಾಗಿದೆ, ಅದೂ ಸಹಾ ನಮ್ಮ ಪಿತ್ರಾರ್ಜಿತ ಸ್ವತ್ತು ಎಂದರೆ ಸರಿ. ಸದರಿ ಸ್ವತ್ತನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಸದರಿ ಸ್ವತ್ತನ್ನು ಖರೀದಿಸಿರುವ ಆಂಜಿನಪ್ಪರವನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿಯು ನಮಗೆ ಗೊತ್ತಿರಲಿಲ್ಲ ಎಂದು ತಿಳಿಸಿದ್ದಾರೆ. ವಿಚಾರ ತಿಳಿದಿದ್ದರೂ ಸಹ ಗೊತ್ತಿರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ನನ್ನ ತಂದೆ 15 ವರ್ಷಗಳ ಹಿಂದೆ ಮರಣ ಹೊಂದಿದ್ದಾರೆ. ದಿನಾಂಕಃ 25.06.1972 ರಂದು ನನ್ನ ತಂದೆ ಮತ್ತು 1, 2, ಹಾಗೂ 4 ನೇ ಪ್ರತಿವಾದಿಗಳು ಸೇರಿ ಕುಟುಂಬದ ಸ್ವತ್ತುಗಳನ್ನು ವಿಭಾಗಿಸಿಕೊಂಡಿದ್ದಾರೆಂದರೆ ನನಗೆ ಗೊತ್ತಿಲ್ಲ. ನಾನು ಯಾವ ದಾಖಲೆಗೂ ಸಹಿ ಮಾಡಿಲ್ಲ ಎಂದು ತಿಳಿಸಿರುತ್ತಾರೆ. ವಿಭಾಗ ಪತ್ರದಲ್ಲಿ ರೂ. 600/- ಸಾಲವನ್ನು ತೀರಿಸಬೇಕೆಂದು 1 ನೇ ಪ್ರತಿವಾದಿಯ ಮೇಲೆ ಹೊಣೆಗಾರಿಕೆ

ನೀಡಿಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯು ಸಾಲವನ್ನು ತೀರಿಸುವವರೆಗೂ ಸದರಿ ವಿಭಾಗ ಪತ್ರ ನನ್ನ ಬಳಿಯೇ ಇತ್ತು ಎಂದರೆ ಸರಿಯಲ್ಲ. ಸದರಿ ವಿಭಾಗದಲ್ಲಿ ನನ್ನ ತಂದೆ ಗಂಗಣ್ಣ ರವರು ಸರ್ವೆ ನಂ.123/2 ರಲ್ಲಿ 12 ತೆಂಗಿನ ಮರಗಳಿರುವ 12 ಗುಂಟೆ ಸ್ವತ್ತನ್ನು ಸರ್ವೆ ನಂ.85 ರಲ್ಲಿ 4 ಎಕರೆ 18 ಗುಂಟೆ ಸ್ವತ್ತಿನಲ್ಲಿ 4 ನೇ ಒಂದು ಭಾಗದ ಸ್ವತ್ತನ್ನು ಸರ್ವೆ ನಂ.122/2 ರಲ್ಲಿ 17 ಗುಂಟೆ ಸ್ವತ್ತನ್ನು ತಮ್ಮ ಭಾಗಕ್ಕೆ ಇಟ್ಟುಕೊಂಡಿದ್ದರು ಎಂದರೆ ಸರಿ. ಸದರಿ ವಿಭಾಗ ಪತ್ರದಲ್ಲಿ ಹೆಣ್ಣು ಮಕ್ಕಳನ್ನು ತವರು ಮನೆಗೆ ಕರೆದು ಕಳುಹಿಸುವ ಸಲುವಾಗಿ ಸದರಿ ಸ್ವತ್ತುಗಳನ್ನು ಇಟ್ಟುಕೊಂಡಿದ್ದೇನೆಂದು ಬರೆದಿದ್ದರು ಎಂದರೆ ಸರಿ. ನನ್ನ ತಂದೆಗೆ ನಾನು ಒಬ್ಬಳೇ ಮಗಳು ಎಂದರೆ ಸರಿ. ಮೇಲೆ ಹೇಳಿದಂತೆ ನನ್ನ ತಂದೆ ತಮ್ಮ ಭಾಗಕ್ಕೆ ಉಳಿಸಿಕೊಂಡ ಸ್ವತ್ತುಗಳನ್ನು ಬಿಟ್ಟು ಉಳಿದ ಸ್ವತ್ತುಗಳನ್ನು ನನ್ನ ಸಹೋದರರು ವಿಭಾಗಿಸಿಕೊಂಡಿದ್ದಾರೆಂದರೆ ನನಗೆ ಗೊತ್ತಿಲ್ಲ. ಎಲ್ಲರೂ ಒಟ್ಟಾಗಿ ಇದ್ದರು, ಈಗ ಪ್ರತಿವಾದಿಗಳು ಸ್ವತ್ತುಗಳನ್ನು ಮಾರಾಟ ಮಾಡಲು ಪ್ರಯತ್ನಿಸಿದರು, ಆದುದರಿಂದ ಈ ದಾವೆಯನ್ನು ಸಲ್ಲಿಸಿರುತ್ತೇನೆ.

ವಿಭಾಗ ಪತ್ರದ ಆಧಾರದಲ್ಲಿ 1 ನೇ ಪ್ರತಿವಾದಿಯು ತನ್ನ ಹೆಸರಿಗೆ ಸ್ವತ್ತುಗಳ ಖಾತೆ ಮಾಡಿಸಿಕೊಂಡಿದ್ದಾರೆಂದರೆ ನನಗೆ ಗೊತ್ತಿಲ್ಲ. ಸದರಿ ಖಾತೆ ಮಾಡಿಸಿಕೊಂಡ ಸ್ವತ್ತುಗಳಲ್ಲಿ 1 ನೇ ಪ್ರತಿವಾದಿಯು ಸ್ವಾಧೀನದಲ್ಲಿ ಇದ್ದಾರೆ ಎಂದರೆ ನನ್ನ ತಂದೆಯ ಮರಣದ ನಂತರ ಅವರೇ ಸ್ವಾಧೀನದಲ್ಲಿ ಇದ್ದಾರೆ ಎನ್ನುತ್ತಾರೆ. ನನ್ನ ತಂದೆಯ ಮರಣದ ನಂತರ ಸರ್ವೆ ನಂ.85/1 ರಲ್ಲಿ 1 ಎಕರೆ 21 ಗುಂಟೆ ಸ್ವತ್ತನ್ನು ನನಗೆ ನೀಡಲಾಗಿದ್ದು ನಾನು ಅದನ್ನು 4 ನೇ ಪ್ರತಿವಾದಿಗೆ ಖಾತೆ ಮಾಡಿಸಿಕೊಟ್ಟು ಮಾರಾಟ ಮಾಡಿಸಿ ಹಣವನ್ನು ನಾವು ಹಂಚಿಕೊಂಡಿದ್ದೇವೆಂದರೆ ಸರಿಯಲ್ಲ. ಸರ್ವೆ ನಂ.123/2 ರಲ್ಲಿ 12 ಗುಂಟೆ ಸ್ವತ್ತನ್ನು ನನ್ನ ತಂದೆ ನನಗೆ ಅರಿಶಿನ ಕುಂಕುಮಕ್ಕೆಂದು ನೀಡಿದ್ದರು

ಎಂದರೆ ಸರಿ. ನಾನು ಸದರಿ ಸ್ವತ್ತಿನ ಸಂಬಂಧ 3 ನೇ ಪ್ರತಿವಾದಿಯ ಹೆಸರಿಗೆ ಖಾತೆ ಮಾಡಿಸಿಕೊಟ್ಟಿದ್ದೇನೆಂದರೆ ಸರಿಯಲ್ಲ. ಸರ್ವೆ ನಂ.123/2 ರ ಸ್ವತ್ತಿನಲ್ಲಿ ಹುಣಸೆ ಮರಗಳು ಇವೆ ಎಂದರೆ ಒಂದು ಮರ ಇದೆ ಎಂದು ಸಾಕ್ಷಿ ಹೇಳುತ್ತಾರೆ. ಹುಣಸೆ ಹಣ್ಣುಗಳನ್ನು ನಾನೇ ತೆಗೆದುಕೊಳ್ಳುತ್ತಿದ್ದೇನೆಂದರೆ ಸರಿಯಲ್ಲ. ದಿನಾಂಕಃ 25.06.1979 ರಂದು ನನ್ನ ತಂದೆ ನನಗಾಗಿ ಸ್ವತ್ತುಗಳನ್ನು ಇಟ್ಟಿದ್ದರು, ನಾನು ಅವುಗಳನ್ನು ಪಡೆದುಕೊಂಡು 4 ನೇ ಪ್ರತಿವಾದಿಯೊಡನೆ ಸೇರಿ ಮಾರಾಟ ಮಾಡಿ ಈಗ ಸುಳ್ಳು ವಿವರಗಳ ದಾವೆ ಸಲ್ಲಿಸಿದ್ದೇನೆಂದರೆ ಸರಿಯಲ್ಲ. ವಿಭಾಗದ ನಂತರ 1 ನೇ ಪ್ರತಿವಾದಿಯ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಈ ದಾವೆ ಸಲ್ಲಿಸಿದ್ದೇನೆಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಸ್ವತ್ತುಗಳ ಮೇಲೆ ನನಗೆ ಯಾವುದೇ ಹಕ್ಕು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಸ್ವತ್ತುಗಳ ವಿಭಾಗ ನಡೆದ 42 ವರ್ಷಗಳ ನಂತರ ಈ ದಾವೆ ಸಲ್ಲಿಸಿದ್ದೇನೆಂದರೆ ಸರಿಯಲ್ಲ. ವಿಭಾಗ ನಡೆದಿರುವ ವಿಷಯ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಸರ್ವೆ ನಂ.122/3 ರಲ್ಲಿ 10 ಗುಂಟೆ ಸ್ವತ್ತನ್ನು ನನಗೆ ಎಂದು ಬಿಟ್ಟಿದ್ದು ಅದು ಬೀಳು ಬಿದ್ದಿದೆ ಎಂದರೆ ನನ್ನ ತಂದೆಯ ಹೆಸರಿನಲ್ಲಿ ಇದೆ ಎಂದು ಸಾಕ್ಷಿ ಹೇಳುತ್ತಾರೆ.

ಪಾಟೀ ಸವಾಲುಃ **5** ಮತ್ತು **6** ನೇ ಪ್ರತಿವಾದಿಗಳ ಪರ ವಕೀಲರಿಂದಃ

ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ 1, 2 ಮತ್ತು 4 ನೇ ಪ್ರತಿವಾದಿಗಳ ಹೆಸರಿಗೆ ಖಾತೆ ಆಗಿರುವ ವಿಚಾರ ತಿಳಿದಿದೆಯೇ ಎಂದರೆ ಸಾಕ್ಷಿಯು ನನಗೆ ಯಾವುದೇ ವಿಚಾರ ತಿಳಿದಿಲ್ಲ ಎಂದು ಹೇಳುತ್ತಾರೆ. ನ್ಯಾಯಾಲಯಕ್ಕೆ ನಾನು ಸಲ್ಲಿಸಿರುವ ದಾಖಲೆಗಳನ್ನು ನೋಡಿದ್ದೇನೆ.

ನನಗೆ ಓದು ಬರಹ ಬರುವುದಿಲ್ಲ. ನಾನು ಕನ್ನಡ ಭಾಷೆಯಲ್ಲಿ ಸಹಿ ಮಾಡುತ್ತೇನೆ. ನಾನು ಹಾಜರುಪಡಿಸಿರುವ ದಾಖಲೆಗಳಲ್ಲಿ ಸರ್ವೆ ನಂ.123/2 ರಲ್ಲಿ 1 ನೇ ಪ್ರತಿವಾದಿಯ ಹೆಸರು 1 ಎಕರೆ 13 ಗುಂಟೆಗೆ ಸಂಬಂಧಿಸಿ ಬರುತ್ತಿದೆ ಮತ್ತು 10 ಗುಂಟೆ ಸ್ವತ್ತಿಗೆ ಸಂಬಂಧಿಸಿ 3 ನೇ ಪ್ರತಿವಾದಿಯ ಹೆಸರು ಬರುತ್ತಿದೆ ಎಂದರೆ ಅವರು ವಿಭಾಗ ಮಾಡಿಕೊಂಡಿರುತ್ತಾರೆ ಎಂದು ಹೇಳಿದ್ದಾರೆ. ಸರ್ವೆ ನಂ.85/1 ರಲ್ಲಿ 2 ನೇ ಪ್ರತಿವಾದಿಯ ಹೆಸರಿಗೆ 1 ಎಕರೆ 12 ಗುಂಟೆ, 1 ನೇ ಪ್ರತಿವಾದಿಯ ಹೆಸರಿಗೆ 1 ಎಕರೆ 4 ಗುಂಟೆ ಸ್ವತ್ತು ವಿಭಾಗದಲ್ಲಿ ಬಂದಿದೆ ಎಂದರೆ ಅವರು ಏನೂ ಮಾಡಿಕೊಂಡಿದ್ದಾರೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. MR No.4/1989-90 ಹಾಗೂ MR No.6/1990-91 ಎಂಬುದಾಗಿ 1 ನೇ ಪ್ರತಿವಾದಿಯ ಹೆಸರಿಗೆ ಅವರ ಭಾಗದ ಸ್ವತ್ತುಗಳಿಗೆ ಸಂಬಂಧಿಸಿ ಖಾತೆ ಬದಲಾವಣೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳ ಹೆಸರಿಗೆ ಮಾಡಿರುವ ಖಾತೆಗಳನ್ನು ಎ.ಸಿ ನ್ಯಾಯಾಲಯದಲ್ಲಿ ಪ್ರಶ್ನಿಸಿಲ್ಲ. 4 ನೇ ಪ್ರತಿವಾದಿ ನಾಗರಾಜು ರವರು ನನ್ನೊಡನೆ ಅನ್ಯೋನ್ಯವಾಗಿ ಇದ್ದಾರೆ ಎಂದರೆ ಎಲ್ಲರೂ ಅನ್ಯೋನ್ಯವಾಗಿ ಇದ್ದಾರೆ ಎಂದು ಸಾಕ್ಷಿ ಹೇಳುತ್ತಾರೆ. 1979 ರಲ್ಲಿ ನಡೆದ ವಿಭಾಗದಲ್ಲಿ ಸರ್ವೆ ನಂ.85/1 ರಲ್ಲಿ 4 ನೇ ಪ್ರತಿವಾದಿಗೆ 1 ಎಕರೆ 4 1/2 ಗುಂಟೆ ಸ್ವತ್ತು ಬಂದಿದೆ ಎಂದರೆ ಸರಿ. ನನ್ನ ಸಹೋದರರು ಪ್ರತ್ಯೇಕವಾಗಿ ವಾಸ ಇದ್ದಾರೆ ಎಂದರೆ ಪ್ರತ್ಯೇಕವಾಗಿ ವಾಸ ಇರುವುದರಿಂದ ಸ್ವತ್ತುಗಳನ್ನು ಏನು ಮಾಡಿಕೊಂಡಿದ್ದಾರೋ ಗೊತ್ತಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. 1 ಮತ್ತು 2 ನೇ ಪ್ರತಿವಾದಿಗಳು ಹಾಗೂ ಅವರ ಕುಟುಂಬದವರು ಸೇರಿ ದಿನಾಂಕಃ 31.08.2015 ರಂದು ಸರ್ವೆ ನಂ.85/1 ರಲ್ಲಿ 1 ನೇ ಪ್ರತಿವಾದಿಯ ಭಾಗಾಂಶದಲ್ಲಿ 20.08 ಗುಂಟೆ ಸ್ವತ್ತನ್ನು ಹಾಗೂ 2 ನೇ ಪ್ರತಿವಾದಿಯ ಭಾಗದ ಸ್ವತ್ತಿನಲ್ಲಿ 18 ಗುಂಟೆ ಸ್ವತ್ತನ್ನು ಮಾರಾಟ

ಮಾಡುವುದಾಗಿ ನೊಂದಾಯಿತ  ಕ್ರಯದ ಕರಾರು ಪತ್ರ 5 ನೇ ಪ್ರತಿವಾದಿಗೆ ಮಾಡಿಕೊಟ್ಟಿದ್ದಾರೆಂದರೆ   ಮಾಡಿಕೊಂಡಿರಬಹುದು  ನನಗೆ  ಗೊತ್ತಿಲ್ಲ ಎಂದು ಸಾಕ್ಷಿ  ನುಡಿಯುತ್ತಾರೆ.  ಸದರಿ ಸ್ವತ್ತುಗಳಲ್ಲಿ  5 ನೇ ಪ್ರತಿವಾದಿಯು ಪ್ರಸ್ತುತ ಸ್ವಾಧೀನ ಹೊಂದಿದ್ದಾರೆಂದರೆ ಯಾರು  ಇರುವುದಿಲ್ಲ ಎಂದು ಸಾಕ್ಷಿ ಹೇಳುತ್ತಾರೆ.    5 ನೇ ಪ್ರತಿವಾದಿಯು ಕ್ರಯ ಪತ್ರ ಬರೆಸಿಕೊಳ್ಳುವ ಸಲುವಾಗಿ OS No.312/2018  ರಂತೆ ಗುಬ್ಬಿಯ ಸಿವಿಲ್ ನ್ಯಾಯಾಲಯದಲ್ಲಿ ಸಲ್ಲಿಸಿದ್ದು, ಅದು ಡಿಕ್ರಿಯಾಗಿದೆ ಎಂದು ನನಗೆ ಗೊತ್ತಿಲ್ಲ.   1 ಮತ್ತು 2 ನೇ ಪ್ರತಿವಾದಿಗಳು ಹಾಗೂ ಅವರ ಕುಟುಂಬದವರು ದಿನಾಂಕಃ 31.08.2015 ರಂದು 6 ನೇ ಪ್ರತಿವಾದಿಗೆ   ಸರ್ವೆ ನಂ.85/1 ರಲ್ಲಿ  1 ನೇ ಪ್ರತಿವಾದಿಯ ಭಾಗಾಂಶದಲ್ಲಿ  20.08 ಗುಂಟೆ ಸ್ವತ್ತನ್ನು ಹಾಗೂ 2 ನೇ ಪ್ರತಿವಾದಿಯ ಭಾಗದ ಸ್ವತ್ತಿನಲ್ಲಿ 18 ಗುಂಟೆ  ಸ್ವತ್ತನ್ನು   ಮಾರಾಟ ಮಾಡುವುದಾಗಿ ನೊಂದಾಯಿತ  ಕ್ರಯದ ಕರಾರು ಪತ್ರ  ಮಾಡಿಕೊಟ್ಟಿದ್ದಾರೆಂದರೆ , ಮಾಡಿಕೊಂಡಿರಬಹುದು ನನಗೆ ಗೊತ್ತಿಲ್ಲ ಎಂದು ಸಾಕ್ಷಿ  ನುಡಿಯುತ್ತಾರೆ. ಸದರಿ ಸ್ವತ್ತುಗಳಲ್ಲಿ 6 ನೇ ಪ್ರತಿವಾದಿಯು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.   6 ನೇ ಪ್ರತಿವಾದಿಯು ಕ್ರಯ ಪತ್ರ ಬರೆಸಿಕೊಳ್ಳುವ ಸಲುವಾಗಿ OS No.322/2018   ರಂತೆ  ಗುಬ್ಬಿಯ ಸಿವಿಲ್ ನ್ಯಾಯಾಲಯದಲ್ಲಿ ಸಲ್ಲಿಸಿದ್ದು, ಅದು ಡಿಕ್ರಿಯಾಗಿದೆ ಎಂದು ನನಗೆ ಗೊತ್ತಿಲ್ಲ.   ಪ್ರಸ್ತುತ ಎರಡು ದಾವೆಗಳಿಗೆ ಸಂಬಂಧಿಸಿ ಜಾರಿ ಅರ್ಜಿ ಚಾಲ್ತಿಯಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ.    1979 ನೇ ಸಾಲಿನಲ್ಲಿಯೇ ನನ್ನ ತಂದೆ ಮತ್ತು ಸಹೋದರರ ನಡುವೆ   ವಿಭಾಗ ನಡೆದಿದ್ದರು ಸಹ  ಗೊತ್ತಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಸುಮಾರು 40 ವರ್ಷಗಳ ಹಿಂದೆ  ನನ್ನ ವಿವಾಹ ಆಗಿದೆ.   ನನ್ನ ವಿವಾಹ ವಾದ  ಸಮಯದಿಂದಲೂ ನಾನು  ಸ್ವತ್ತುಗಳಲ್ಲಿ   ಸ್ವಾಧೀನ

ಹೊಂದಿಲ್ಲ ಎಂದರೆ ಪ್ರತಿವಾದಿಗಳು ನನಗೆ ಅವಕಾಶ ನೀಡುತ್ತಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನನಗೆ ದಾವಾ ಸ್ವತ್ತುಗಳಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಹಾಗೂ 4ನೇ ಪ್ರತಿವಾದಿಯ ಚಿತಾವಣೆ ಮೇರೆಗೆ ಈ ದಾವೆ ಸಲ್ಲಿಸಿದ್ದೇನೆಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ, ಕೇಳಿದೆ, ಸರಿ ಇದೆ, ಎಂದರು.

SD/-
(ಅನುಪಮ.ಡಿ. )
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಗುಬ್ಬಿ .